2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ,
ಬೆಳಗಾವಿ.

ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 12

ಸಿ.ಡಬ್ಲ್ಯೂಃ 26

ಸಾಕ್ಷಿಯ ಹೆಸರುಃ ಶ್ರೀ. ವಿಶಾಲ ಭೀಮರಾವ ಪದ್ಮನ್ನವರ
ತಂದೆಯ ಹೆಸರುಃ ಭೀಮರಾವ ಪದ್ಮನ್ನವರ
ವಯಸ್ಸುಃ 32 ವರ್ಷ
ಉದ್ಯೋಗಃ ಸಹಾಯಕ ವ್ಯವಸ್ಥಾಪಕರು HDFC ಬ್ಯಾಂಕ್
ವಾಸಃ ಬೆಳಗಾವಿ

**ದಿನಾಂಕಃ 23.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಮೃತ ಸಂತೋಷ ಪದ್ಮನ್ನವರ ನನ್ನ ಚಿಕ್ಕಪ್ಪ. 1 ನೇ ಆರೋಪಿ ಆತನ ಹೆಂಡತಿ, 5 ನೇ ಆರೋಪಿ 1 ನೇ ಆರೋಪಿಯ ತಮ್ಮ. ಚಾಸಾಃ 1 ಮೃತ ಸಂತೋಷ ಪದ್ಮನ್ನವರ ರವರ ಮಗಳು, ಚಾಸಾಃ 24 ಮತ್ತು 25 ರವರು ಅವರ ಗಂಡು ಮಕ್ಕಳು. ಚಾಸಾಃ 27 ನನ್ನ ಚಿಕ್ಕಪ್ಪ. 1 ನೇ ಆರೋಪಿ ಹಾಗೂ ನನ್ನ ಮೃತ ಚಿಕ್ಕಪ್ಪನ ನಡುವೆ ಆಗಾಗ ತಂಟೆಯಾಗುತ್ತಿತ್ತು ಆದರೆ ಯಾವ ಕಾರಣಕ್ಕೆಂದು ನನಗೆ ಗೊತ್ತಿಲ್ಲ.

2. ದಿಃ 09.10.2024 ರ ರಾತ್ರಿ 08.10 ಕ್ಕೆ ನನ್ನ ತಮ್ಮ ಚಾಸಾಃ 24 ಕರೆ ಮಾಡಿ ನನ್ನ ತಂದೆ ಕೀರುಚಾಡುತ್ತಿದ್ದಾರೆ ಬಾ ಎಂದು ಕರೆ ಮಾಡಿದ ಆತ ಕರೆ ಮಾಡಿದ 5 ನಿಮಿಷದಲ್ಲೇ ಅವರ ಮನೆಯ ಬಳಿ ಹೋದೆ. ಆದರೆ ನಾನು ಮನೆಯ ಬಳಿ ಹೋದಾಗ 1 ನೇ ಆರೋಪಿಯು ಬಾಗಿಲನ್ನು ತೆಗೆದರು ಸಹಿತ ನನ್ನನ್ನು ಒಳಗಡೆ ಬಿಡಲಿಲ್ಲ. ನಾನು ನನ್ನ ಚಿಕ್ಕಪ್ಪನ ಬಳಿ ಮಾತನಾಡಬೇಕು ಬಿಡಿ ಎಂದು ಹೇಳಿದರುೂ ಸಹಿತ ಅವರು ಈಗ ಮದ್ಯಪಾನ ಮಾಡಿ ಮಲಗಿದ್ದಾರೆ ನೀನು ಆನಂತರ ಬಾ ಎಂದು ಹೇಳಿ ಕಳುಹಿಸಿದರು. ನಾನು ಕೆಳಗೆ ಹೋಗಿ ಮತ್ತೇ ಚಾಸಾಃ 24 ರವರಿಗೆ ಕರೆ ಮಾಡಿ ನಿನ್ನ ತಂದೆ ಕುಡಿದು ಮಲಗಿದ್ದಾರೆಂದು ನನ್ನನ್ನು ನಿನ್ನ ತಾಯಿ ಒಳಗೆ ಬಿಡುತ್ತಿಲ್ಲ ಎಂದು ಹೇಳಿದ್ದು, ಅದಕ್ಕೆ ಆತನು ನೀನು ನನ್ನ

ತಂದೆಯನ್ನು ಭೇಟಿ ಆಗಿಯೇ ಹೋಗಬೇಕು ಎಂದು ತಾಕೀತು ಮಾಡಿದ. ಆದ್ದರಿಂದ ನಾನು ಮತ್ತೇ ಮೇಲೆ ಹೋಗಿ 1 ನೇ ಆರೋಪಿಯ ಬಳಿ ನಾನು ನನ್ನ ಚಿಕ್ಕಪ್ಪ ಸಂತೋಷ ಪದ್ಮನ್ನವರ ರವರನ್ನು ನೋಡಲೇ ಬೇಕು ಎಂದು ಹಟ ಮಾಡಿದೆ. ಆದರೆ ಅವರು ನಾನು ಈಗ ಬಟ್ಟೆ ಬದಲಾಯಿಸಿಕೊಳ್ಳುತ್ತಿದ್ದೇನೆ ನಿನಗೆ ಬುದ್ಧಿ ಇಲ್ಲವೇ ಹೋಗು ಎಂದು ಸಿಟ್ಟಿನಿಂದ ಹೇಳಿದರು. ಆ ನಂತರ ನಾನು 1 ನೇ ಆರೋಪಿ ಹಾಗೂ ನನ್ನ ಚಿಕ್ಕಪ್ಪ ಜಗಳ ಮಾಡಿಕೊಂಡು ಆತ ಮಲಗಿಕೊಂಡಿರಬಹುದು ಎಂದು ನಾನು ಮನೆಗೆ ಹೊರಟು ಹೋದೆ.

3. ರಾತ್ರಿ 09.00 ಗಂಟೆಗೆ 1 ನೇ ಆರೋಪಿಯು ಕರೆ ಮಾಡಿ ಮಲಗಿದ್ದ ನಿಮ್ಮ ಚಿಕ್ಕಪ್ಪ ಏಳುತ್ತಿಲ್ಲ ಅದಕ್ಕೆ ವೈದ್ಯರನ್ನು ಕರೆ ತಾ ಎಂದು ಹೇಳಿದರು. ಅದಕ್ಕೆ ನಾನು ಡಾಃ ಕುಲಕರ್ಣಿ ರವರನ್ನು ರಾತ್ರಿ 09.15 ಕ್ಕೆ ಕರೆದುಕೊಂಡು ಹೋದೆ. ಆಗ 1 ನೇ ಆರೋಪಿಯನ್ನು ಕೇವಲ ವೈದ್ಯರನ್ನು ಮಾತ್ರ ಒಳಗೆ ಕರೆದುಕೊಂಡು ಹೋದರು ನನ್ನನ್ನು ಕೋಣೆ ಒಳಗೆ ಬಿಡಲಿಲ್ಲ. ಆ ಕಾಲಕ್ಕೆ 1 ನೇ ಆರೋಪಿ ಹಾಗೂ ವೈದ್ಯರು ಕೋಣೆಯ ಬಾಗಿಲು ಹಾಕಿಕೊಂಡರು. ಆಗ ಆ ಕೋಣೆಯಲ್ಲಿ ಅಳವಡಿಸಿದ್ದ ಸಿಸಿಟಿವಿಯ ಡಿಸ್ ಪ್ಲೇ ಹಾಲ್ ನಲ್ಲಿ ಅಳವಡಿಸಿದ್ದ ಟಿವಿಯಲ್ಲಿ ಪ್ರದರ್ಶನವಾಗುತ್ತಿತ್ತು. ಆಗ ಅವರು ಏನು ಮಾಡುತ್ತಿದ್ದಾರೆಂದು ನಾನು ದೃಶ್ಯಾವಳಿಗಳನ್ನು ನೋಡುತ್ತಿದ್ದೆ. ಒಳ ಹೋಗಿದ್ದ ವೈದ್ಯರು ನನ್ನ ಚಿಕ್ಕಪ್ಪನನ್ನು ಪರೀಕ್ಷೆ ಮಾಡಲೇ ಇಲ್ಲ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಗೆ ಮೃತನ ಮನೆಯಲ್ಲಿ ಅಳವಡಿಸಿದ್ದ ಸಿಸಿಟಿವಿಯ ದೃಶ್ಯಾವಳಿಗಳನ್ನು ತೋರಿಸಿ ಗುರುತಿಸಿಕೊಳ್ಳಬೇಕಾದ ಅವಶ್ಯಕತೆ ಇರುವುದರಿಂದ ಈ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಖ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.